**ದಿನಾಂಕಃ 20-09-2021 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲು ಎದುರುದಾರರ ಪರ ಶ್ರೀ ಎಸ್ ಎ ಕೆ ವಕೀಲರಿಂದಃ**

1. ನಾನು ಶಾಲೆ ಕಲಿತಿಲ್ಲ, ಓದಲು , ಬರೆಯಲು ಬರುವುದಿಲ್ಲ. ನಾನು ಉರ್ದು ಶಾಲೆಗೆ ಹೋಗಿಲ್ಲ. ನಾನು ಮೊದಲು ಬೀಡಿ ಕಟ್ಟುವ ಕೆಲಸ ಮಾಡುತ್ತಿದ್ದೆ. ಈಗ ಇಲ್ಲ. ನಾರಾಯಣ ಕಂಪನಿಯ ಬೀಡಿಯನ್ನು ಕಟ್ಟುತ್ತಿದ್ದೆ. 9 ವರ್ಷ ಬೀಡಿ ಕಟ್ಟುವ ಕೆಲಸ ಮಾಡಿದೆ. ಬೀಡಿ ಕುಟ್ಟುವ ಕೆಲಸಕ್ಕೆ ಸಂಬಂಧಪಟ್ಟ ಕಚೇರಿಯಲ್ಲಿ ನನ್ನ ಹೆಸರು ನೊಂದಾಯಿಸಿ, ಗುರುತಿನ ಚೀಟಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನ್ನ ಹೆಸರು ಅಲ್ಲಿ ಇರುವುದಿಲ್ಲ ಮತ್ತು ನನಗೆ ಯಾವುದೇ ಚೀಟಿ ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಬೀಡಿ ಕಟ್ಟಿದ್ದಕ್ಕೆ ನನಗೆ ಆವಾಗ ಪ್ರತಿವಾರ ದುಡ್ಡು ಕೊಡುತ್ತಿದ್ದರು. ನಾನು ಬೀಡಿ ಕಟ್ಟುವ ಕೆಸಲ ಮಾಡುತ್ತಿದ್ದು, ಬೀಡಿ ಕಾರ್ಮಿಕ ಎಂದು ಸಂಬಂಧಪಟ್ಟ ಇಲಾಖೆಯಲ್ಲಿ ನನ್ನ ಹೆಸರು ಸಹ ನೊಂದಾಣಿಯಾಗಿದ್ದು, ಅಲ್ಲಿ ನಾನು ಸಂಬಳ ಪಡೆಯುತ್ತಿದ್ದು, ಈಗಲೂ ಸಹ ನಾನು ಪಿಂಚಣಿಯನ್ನು ಪಡೆಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ.. ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನನ್ನ ಉದ್ಯೋಗವನ್ನು ಮನೆಗೆಲಸ ಮತ್ತು ಬೀಡಿ ಕಟ್ಟುವ ಕೆಲಸ ಎಂದು ಬರೆಸಿರುತ್ತೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಲಾಕ್ ಡೌನ್ ನಿಂದ ನಾನು ಆ ಕೆಲಸವನ್ನುಬಿಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಪ್ರಮಾಣ ಪತ್ರ ಸಲ್ಲಿಸಿದ ದಿನ ನಾನು ಮನೆಗೆಲಸ ಮತ್ತು ಬೀಡಿ ಕಟ್ಟುವ ಕೆಲಸ ಮಾಡುತ್ತಿದ್ದೆ. ಮದುವೆಯಾಗುವದಕ್ಕಿಂತ ಮೊದಲು ನಾನು ಬಟ್ಟೆ ವ್ಯಾಪಾರ ಮಾಡುತ್ತಿದ್ದೆ. ಮದುವೆಯಾದ ನಂತರ ಎದುರುದಾರ ಬಟ್ಟೆ ವ್ಯಾಪಾರ ಮಾಡುವುದು ಬೇಡ ಎಂದಿದ್ದರಿಂದ ಬಿಟ್ಟಿರುತ್ತೇನೆ. ಬಟ್ಟೆ ವ್ಯಾಪಾರವನ್ನು ನಾನು ಸುಮಾರು 4-5 ವರ್ಷ ಮಾಡಿರುತ್ತೇನೆ. ನಾನು ದಾವಣಗೆರೆಯಿಂದ ಮತ್ತು ರಾಣೇಬೆನ್ನೂರಿನ ದೊಡ್ಡಪೇಟೆಯಲ್ಲಿನ ಹೋಲ್ಸೇಲ್ ಅಂಗಡಿಗಳಿಂದ ಬಟ್ಟೆಗಳನ್ನು ತಂದು ಮನೆ ಮನಗೆ ಹೋಗಿ ಬಟ್ಟೆ ವ್ಯಾಪಾರ ಮಾಡುತ್ತಿದ್ದೆನು. ನಾನು ಖಾಯಂ ರಾಣೇಬೆನ್ನೂರಿನ ವಾಸಿ ಎಂದರೆ ಸರಿ. ನನ್ನ

ತಂದೆ ತಾಯಿ ಸಹ ರಾಣೇಬೆನ್ನೂರಿನಲ್ಲಿರುತ್ತಾರೆ ಎಂದರೆ ಸರಿ. ನನ್ನ ಎಲ್ಲಾ ಸಂಬಂಧಿಕರು ರಾಣೇಬೆನ್ನೂರಿನಲ್ಲಿಯೇ ಇರುತ್ತಾರೆ ಎಂದರೆ ಸರಿ. ಎದುರುದಾರನೂ ಸಹ ರಾಣೇಬೆನ್ನೂರಿನವನು ಮತ್ತು ಅವನ ಸಂಬಂಧಿಕರೆಲ್ಲಾರು ರಾಣೇಬೆನ್ನೂರಿನಲ್ಲಿಯೇ ಇರುತ್ತಾರೆ ಎಂದರೆ ಸರಿ. ಶಿವಮೊಗ್ಗದಲ್ಲಿ ನನಗಾಗಲಿ ಅಥವಾ ಎದುರುದಾರರಿಗಾಗಲಿ ಯಾವುದೇ ಸಂಬಂಧಿಕರು ಇರುವುದಿಲ್ಲ ಎಂದರೆ ಸರಿ. ನಾನು ಎದುರುದಾರರನ್ನು ಮೊದಲು ಮದುವೆಯಾಗುವುದಿಲ್ಲ ಎಂದು ಹೇಳಿದೆ ಅದಕ್ಕೆ ಎದುರುದಾರರು ವಿಷ ಕುಡಿದು ಬೆಂಗಳೂರು ಡಾಕ್ಟರ್ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದರು ಆಮೇಲೆ ನನ್ನನ್ನು ದರ್ಗಾಕ್ಕೆ ಕರೆದುಕೊಂಡು ಹೋಗಿ ನನ್ನನ್ನು ಮದುವೆಯಾಗ ಬೇಕು ಎಂದು ಭಾಷೆ ತೆಗೆದುಕೊಂಡು ಆಮೇಲೆ ಶಿವಮೊಗ್ಗದ ದರ್ಗಾಕ್ಕೆ ಕರೆದುಕೊಂಡು ಹೋಗಿ ಮದುವೆ ಮಾಡಿಕೊಂಡಿರುತ್ತಾರೆ. ಈ ವಿಷಯವನ್ನು ನನ್ನ ಅರ್ಜಿಯಲ್ಲಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಬರೆಸಿಲ್ಲ. ಬೆಂಗಳೂರು ಆಸ್ಪತ್ರೆಯಲ್ಲಿ ರಾತ್ರಿ ಅಡ್ಮಿಟ್ ಆಗಿ ಬೆಳಗ್ಗೆ ಡಿಸ್ಚಾರ್ಜ ಆಗಿರುತ್ತಾರೆ. 2006 ನೇ ಇಸವಿಯಲ್ಲಿ ಈ ಘಟನೆ ನಡೆದಿತ್ತು . ಬೆಂಗಳೂರು ಆಸ್ಪತ್ರೆ ದಾಖಲಾತಿಗಳು ನನ್ನ ಬಳಿ ಇರುವುದಿಲ್ಲ. ನಾನು ಹೇಳುವಂತೆ ಎದುರುದಾರ ನನ್ನ ಸಲುವಾಗಿ ಯಾವುದೇ ಆತ್ಮಹತ್ಯೆಗೆ ಪ್ರಯತ್ನ ಪಟ್ಟಿಲ್ಲ ಮತ್ತು ಆರೀತಿ ಯಾವುದೇ ಘಟನೆ ನಡೆದಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮದುವೆ ಎದುರುದಾರರೊಂದಿಗೆ ದಿಃ 12-05-2016 ರಂದು ಶಿವಮೊಗ್ಗದಲ್ಲಿ ಆಗಿದೆ. ಆ ಸಮಯದಲ್ಲಿ ಬುಡೇನ್ ಸಾಬ್ ಹಾಗೂ ಉಳಿದ ಜಮಾತಿನ ಜನರು ಇದ್ದರು ಅವರ ಹೆಸರುಗಳು ನನಗೆ ಹೇಳಲು ಬರುವುದಿಲ್ಲ. ಮದುವೆಯನ್ನು ಮಸೀದಿಯಲ್ಲಿ ಮಾಡಿರುತ್ತಾರೆ ಅವರ ಹೆಸರುಗಳು ನನಗೆ ಹೇಳಲು ಬರುವುದಿಲ್ಲ. ಆ 5

ಜನರಲ್ಲಿ  ನನ್ನ ಸಂಬಂಧಿಕರಾಗಲಿ ಅಥವಾ ಎದುರದಾರರ ಸಂಬಂಜಧಿಕರಾಗಲಿ ಯಾರೂ ಇರಲಿಲ್ಲ. ಆ 5



ಜನರೂ ನನಗಾಗಲಿ ಎದುರುದಾರರಿಗಾಗಲಿ ಸಂಬಂಧಿಕರಿರುವುದಿಲ್ಲ ಮತ್ತು ಪರಿಚಯವೂ ಸಹ ಇರುವುದಿಲ್ಲ.3. ಮದುವೆಯ ಸಮಯಕ್ಕೆ ಎದುರುದಾರರಿಗೆ ಎಷ್ಟು ಜನ ಮಕ್ಕಳು ಇದ್ದರು ಎಂದು ನನಗೆ ಗೊತ್ತಿರಲಿಲ್ಲ, ಮದುವೆಯಾಗಿ ನಾಲ್ಕು ತಿಂಗಳಾದ ನಂತರ ನಾಲ್ಕು ಜನ ಮಕ್ಕಳಿದ್ದರು ಎಂದು ಗೊತ್ತಾಯಿತು. ಮದುವೆಗಿಂತ ನಾಲ್ಕು ತಿಂಗಳ ಮೊದಲು ಎದುರುದಾರ ನನಗೆ ಪರಿಚಯ ಆಗಿದ್ದರು. ಮದುವೆಗಿಂತ ಮೊದಲು ನಾನು ಎದುರುದಾರರ ಮನೆಗೆ ಹೋಗಿಲ್ಲ.

3. ಎದುರುದಾರೊಂದಿಗೆ ನನ್ನ ಮದುವೆ ಮೂರನೇ ಮದುವೆ. ಮೊದಲನೇ ಗಂಡ ತೀರಿಕೊಂಡಿರುತ್ತಾರೆ, ಎರಡನೇ ಗಂಡನೊಂದಿಗೆ ಡೈವರ್ಸ ಆಗಿರುತ್ತದೆ ಎದುರುದಾರ ಮೂರನೇ ಗಂಡ ಇರುತ್ತಾರೆ. ನನ್ನ ಮೊದಲನೇ ಗಂಡನ ಹೆಸರು ಮುನೀರಹಮ್ಮದ್ ಖಾಜಿ. ನನ್ನ ಮೊದಲನೇ ಗಂಡ ತೀರಿಕೊಂಡು ಎಷ್ಟು ವರ್ಷ ಆಗಿದೆ ನನಗೆ ಸರಿಯಾಗಿ ನೆನಪಿಲ್ಲ, ಮರಣ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದೇನೆ . ನಾನು ಮೊದಲನೇ ಗಂಡನೊಂದಿಗೆ ಒಂದು ವರ್ಷ ಬಾಳ್ವೆ ಮಾಡಿರುತ್ತೇನೆ.

**(ವಕೀಲರ ಕೋರಿಕೆ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಗಿಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.